■ ಹನಿ

# ಬಾಸ್ ಶ್ವೇತಾ!



ಅಂತೂ ಇಂತೂ ಸಲ್ಮಾನ್ ಖಾನ್ ನಿರ್ವಹಿಸಿದ 'ಬಿಗ್‌ಬಾಸ್-4' ರಿಯಾಲಿಟಿ ಶೋ ಮುಗಿದಿದೆ. ಶ್ವೇತಾ ತಿವಾರಿ (ಬರ್ತ್‌ಡೇ 4-10-80) ಎಂಬ 'ಕಿರುತೆರೆ ಸುಂದರಿ' ಒಂದು ಕೋಟಿ ರೂಪಾಯಿ ಹಣ ಮತ್ತು ಪ್ರಶಸ್ತಿ ಗೆದ್ದಿದ್ದಾಳೆ. ಇದೇ ಮೊದಲ ಬಾರಿಗೆ ಮಹಿಳೆಯೊಬ್ಬಳಿಗೆ ಈ ಪ್ರಶಸ್ತಿ ಸಂದಿದೆ.

ಶ್ವೇತಾ ಹಲವು ಹಿಂದಿ ಮತ್ತು ಭೋಜ್‌ಪುರಿ ಸಿನಿಮಾಗಳಲ್ಲಿ ನಟಿಸಿದ್ದರೂ ಕಿರುತೆರೆಯಲ್ಲೇ ಹೆಚ್ಚು ಜನಪ್ರಿಯೆ. ಆಕೆ ಇತ್ತೀಚೆಗೆ 'ಇಸ್ ಜಂಗಲ್ ಸೆ ಮುಜೆ ಬಚಾಒ' ಎಂಬ ಟಿವಿ ರಿಯಾಲಿಟಿ ಶೋನಲ್ಲಿ ಭಾಗವಹಿಸಿದ್ದ ಈಕೆ, ಕಾಡಿನಲ್ಲಿ ಸ್ನಾನ ಮಾಡಿದ ದೃಶ್ಯ ನೆಟ್‌ನಲ್ಲಿ 'ಹಾಟ್ ಶೋ' ಎನ್ನಿಸಿಕೊಂಡಿತ್ತು. ಮೂಲತಃ ಪ್ರತಾಪ್‌ಘಡದ ಈಕೆ, ಮುಂಬೈಯ ಸೈಂಟ್ ಇಸಾಬೆಲ್ ಸ್ಕೂಲಿನ ವಿದ್ಯಾರ್ಥಿನಿ. ಸ್ಟಾರ್ ಪ್ಲಸ್‌ನ 'ಕಸೌತಿ ಜಿಂದಗೀ ಕೆ' ಎಂಬ ಅತ್ಯಂತ ಜನಪ್ರಿಯ ಸೀರಿಯಲ್‌ನಲ್ಲಿ ಈಕೆ ನಿರ್ವಹಿಸಿದ ಪ್ರೇರಣಾ ಪಾತ್ರ ಅತ್ಯಂತ ಜನಪ್ರಿಯ. ರಂಗೋಲಿ, ಜಲಕ್ ದಿಕ್‌ಲಾಜಾ, ಕಹೀಂ ಕಿಸೀ ರೋಜ್, ಆನೇವಾಲಾ ಪಲ್ ಮುಂತಾಗಿ ಈಕೆಯ ಸೀರಿಯಲ್‌ಗಳ ಪಟ್ಟಿ ಉದ್ದವಿದೆ. ಟಿವಿಯ ಜನಪ್ರಿಯ ನಿರೂಪಕಿಯರಲ್ಲಿ ಶ್ವೇತಾ ಹೆಸರು ಮುಂಚೂಣಿಯಲ್ಲಿದೆ.

18ರ ಹರೆಯದಲ್ಲೇ ನಟ ರಾಜಾ ಚೌಧುರಿಯನ್ನು ಮದುವೆಯಾಗಿ, 9 ವರ್ಷ ಬಳಿಕ ಸೋಡಾಚೀಟಿ ಕೊಟ್ಟಿರುವ ಶ್ವೇತಾಗೆ ಈಗ ಪುಟ್ಟ ಮಗಳು ಪಲಕ್ ದೊಡ್ಡ ಆಸ್ತಿ. 'ಒಂದು ಕೋಟಿ ರೂಪಾಯಿಯನ್ನು ಏನು ಮಾಡುತ್ತೀಯಾ?' ಎಂದು ಕೇಳಿದಾಗ, ಆಕೆ ಮಗಳತ್ತ ಕೈತೋರಿಸಿದ್ದಾಳೆ. 'ಜಯೇಶ್ ಬಂಕರ್ ಎಂಬ ಟೆಕ್ಕಿ ಗೆಳೆಯನನ್ನು ಈಕೆ ಶೀಘ್ರವೇ ಮದುವೆಯಾಗುತ್ತಾಳೆ' ಎಂಬ ಸುದ್ದಿಯೂ ಇದೆ.

# ಇನ್ನೊಬ್ಬ ಮೂರ್ತಿ

ಐಗೇಟ್ ಕಾರ್ಪೊರೇಶನ್ ಅಧ್ಯಕ್ಷ ಮತ್ತು ಸಿಇಓ, ಫಣೀಶ್ ಮೂರ್ತಿಯ ವನವಾಸ ಸದ್ಯಕ್ಕೆ ಮುಗಿದಂತಿದೆ. 1992ರಿಂದ 2002ರವರೆಗೆ ಇನ್ಫೋಸಿಸ್ ಟೆಕ್ನಾಲಜೀಸ್ ಕಂಪೆನಿಯಲ್ಲಿ ನಿರ್ದೇಶಕನಾಗಿ ಅಮೆರಿಕದಲ್ಲಿ ಉನ್ನತ ಹುದ್ದೆ ನಿಭಾಯಿಸಿ ಕಂಪೆನಿಯ ಮಾರ್ಕೆಟಿಂಗ್‌ನಲ್ಲಿ ಪ್ರಮುಖ ಪಾತ್ರ ಹೊಂದಿದ್ದ ಫಣೀಶ್ ಮೂರ್ತಿ ಆಗ 'ಇನ್ನೊಬ್ಬ ಮೂರ್ತಿ' ಎಂದೇ ಪ್ರಸಿದ್ಧರಾಗಿದ್ದರು. ಇನ್ಫಿ ಸ್ಥಾಪಕ ನಾರಾಯಣಮೂರ್ತಿ ಅವರನ್ನು ಬಿಟ್ಟರೆ ಆಗ ಮಾಧ್ಯಮಗಳಲ್ಲಿ ಹೆಚ್ಚು ಸುದ್ದಿ ಮಾಡಿದ್ದು ಇದೇ ಇನ್ನೊಬ್ಬ ಮೂರ್ತಿ. ಆದರೆ ರಿಕಾ ಮ್ಯಾಕ್ಸಿಮೋವಿಚ್ ಎಂಬ ಇನ್ಫಿ ಉದ್ಯೋಗಿ 'ತನಗೆ ಫಣೀಶ್ ಲೈಂಗಿಕ ಕಿರುಕುಳ ನೀಡಿದ್ದಾನೆಂದು' ಆರೋಪಿಸಿ ಸುದ್ದಿ ಮಾಡಿದ ಬಳಿಕ ಫಣೀಶ್ ಕೀರ್ತಿ ಮಂಕಾಯಿತು. ಇನ್ಫಿಗೆ ಬೈ ಹೇಳಬೇಕಾಯ್ತು. ಮೊಕದ್ದಮೆ ಎದುರಿಸಿ, ಕೊನೆಗೆ ರಿಕಾಳಿಗೆ 30 ಲಕ್ಷ ಡಾಲರ್ ಪರಿಹಾರ ನೀಡಬೇಕಾಯ್ತು.

ಅದೆಲ್ಲ ಹಳೇ ಕಥೆ. ಆ ಬಳಿಕ ಫಣೀಶ್ ಕ್ವಿಂಟಾಟ್ ಎಂಬ ಕಂಪೆನಿ ನಡೆಸಿ ಆ ಕಂಪೆನಿಯನ್ನು ಐಗೇಟ್ ಕಂಪೆನಿಯಲ್ಲಿ ವಿಲೀನಗೊಳಿಸಿ, ಐ ಗೇಟ್‌ನ ಸಿಇಓ ಕೂಡಾ ಆದರು. ಈಗ ಐಗೇಟ್ ಕಂಪೆನಿ ಭಾರತದ ಪಟ್ನಿ ಕಂಪ್ಯೂಟರ್ ಸಿಸ್ಟಮ್ಸ್‌ನ್ನು ಖರೀದಿಸಿದೆ. ಪಟ್ನಿ ಭಾರತದ ಏಳನೇ ಅತಿದೊಡ್ಡ ಸಾಫ್ಟ್‌ವೇರ್ ಕಂಪೆನಿಯಾಗಿತ್ತು. ಈ ಖರೀದಿಯ ಬಳಿಕ ಐಗೇಟ್ ಭಾರತದ ನಾಲ್ಕು ಪ್ರಮುಖ ಸಾಫ್ಟ್‌ವೇರ್ ಕಂಪೆನಿಗಳಲ್ಲಿ ಒಂದೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇನ್ಫಿ ವಿಪ್ರೊ, ಟಿಸಿಎಸ್ ಮುಂತಾದ ಭಾರತದ ದೈತ್ಯ ಸಾಫ್ಟ್‌ವೇರ್ ಕಂಪೆನಿಗಳ ಸಾಲಿಗೆ ಈಗ ಐಗೇಟ್ ಕೂಡಾ ಸೇರಿದೆ.



ಪಟ್ನಿಯ ಶೇಕಡಾ 83ರಷ್ಟು ಷೇರುಗಳನ್ನು ಖರೀದಿಸಲು ಐಗೇಟ್ ರೂ 5500 ಕೋಟಿ ನೀಡಿದೆಯಂತೆ. ಅದಕ್ಕಾಗಿ ಫಣೀಶ್‌ಗೆ ಬ್ಯಾಂಕುಗಳು ರೂ 3500 ಕೋಟಿ ಸಾಲ ನೀಡಿವೆಯಂತೆ. ಇದಕ್ಕೂ ಮುನ್ನ ಫಣೀಶ್ ಸತ್ಯಂ ಕಂಪ್ಯೂಟರ್ಸ್‌ಅನ್ನು ಖರೀದಿಸುವ ಯತ್ನ ನಡೆಸಿದ್ದು ಸಫಲವಾಗಿರಲಿಲ್ಲ. ಈಗ ನಡೆದಿರುವುದೂ ಬಿಗ್ ಸೇಲ್. 47ರ ಹರೆಯದ, ಐಐಎಂ ಅಹ್ಮದಾಬಾದ್‌ನ ಪದವೀಧರ ಮೂರ್ತಿ ಐಗೇಟ್ ಅನ್ನು ಎತ್ತ ಕೊಂಡೊಯ್ಯುತ್ತಾರೆಂಬ ಕುತೂಹಲ ಈಗ ಎಲ್ಲರದ್ದು.

# ಸಿಂಗಲ್ ಶಕೀರಾ



'ವಕಾ ವಕಾ' ಖ್ಯಾತಿಯ ಕೊಲಂಬಿಯನ್ ಗಾಯಕಿ ಶಕೀರಾ (ಬರ್ತ್‌ಡೇ 2-2-77) ಈಗ ಮತ್ತೆ ಸಿಂಗಲ್ ಆಗಿದ್ದಾಳಂತೆ. 11 ವರ್ಷಗಳಿಂದ ಒಟ್ಟಿಗೇ ವಾಸಿಸುತ್ತಿದ್ದ ಆಂಟೊನಿಯೊ ಡಿಲಾ ರುವಾನಿಗೆ (37) ಶಕೀರಾ ಸೋಡಾಚೀಟಿ ಕೊಟ್ಟಿದ್ದಾಳೆ. ಆದರೆ ಈ ಸೋಡಾಚೀಟಿ ಬೇರೆಲ್ಲರಂತೆ ಜಗಳದಲ್ಲಿ ಉಂಟಾದ ಚೀಟಿಯಲ್ಲ ಅನ್ನೋದು ವಿಶೇಷ. ಇಬ್ಬರೂ ಸೇರಿ ಸುದೀರ್ಘವಾಗಿ ಚರ್ಚಿಸಿ, ಪರಸ್ಪರ ಬೇರೆಯಾಗಿ ವಾಸಿಸಲು ಸಂತೋಷದಿಂದ ನಿರ್ಧರಿಸಿದ್ದಾರಂತೆ. 'ನಮ್ಮ ನಡುವೆ ಯಾವ ಕಹಿಯೂ ಇಲ್ಲ. ಇನ್ನು ಮುಂದೆ ನಾವು ಒಳ್ಳೆಯ ಗೆಳೆಯರಾಗಿರುತ್ತೇವೆ. ಹಾಗೆಯೇ ನಮ್ಮ ನಡುವಣ ಬಿಸಿನೆಸ್ ಪಾರ್ಟ್ನರ್‌ಶಿಪ್ ಹಾಗೆಯೇ ಮುಂದುವರಿಯಲಿದೆ' ಎಂದು ಸ್ವತಃ ಶಕೀರಾ ಪ್ರಕಟಿಸಿದ್ದಾಳೆ.

ಶಕೀರಾ ಇಸಾಬೆಲ್ ಮುಬಾರೆಕ್ ರಿಪೋಲ್ ಎಂಬ ಉದ್ದ ಹೆಸರುಳ್ಳ ಶಕೀರಾ ಬುದ್ಧಿವಂತೆ. ಸ್ಪಾನಿಶ್, ಪೋರ್ಚುಗೀಸ್ ಜತೆಗೆ ಇಂಗ್ಲಿಷ್‌ಅನ್ನೂ ಚೆನ್ನಾಗಿ ಕಲಿತುಕೊಂಡಿರುವ ಈ ಕೊಲಂಬಿಯನ್ ಅಮೆರಿಕಾ, ಯೂರೋಪ್ ಮತ್ತು ಏಷ್ಯಾದ ಸಂಗೀತ-ನೃತ್ಯ ಪ್ರೇಮಿಗಳಿಗೆ ಹುಚ್ಚು ಹಿಡಿಸಿರುವಾಕೆ. ಶ್ರೀಮಂತಿಕೆಯ ಸುಪ್ಪತ್ತಿಗೆಯಲ್ಲಿದ್ದರೂ ಮಕ್ಕಳಿಲ್ಲ ಎನ್ನುವುದೊಂದೇ ಸದ್ಯಕ್ಕೆ ಈಕೆಯ ಕೊರಗಂತೆ. ★

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65